ದಾಖಲಾಗಿದೆ. ಅಲ್ಲಿಂದ ವೇಗವಾಗಿ ಬಂದರೆ ಹತ್ತು ನಿಮಿಷಗಳಲ್ಲಿ ಮನೆ ತಲುಪಬಹುದು. ಮನೆಗೆ ಬಂದವನೇ ಹೆಂಡತಿಗೆ ಇಟ್ಟಿಗೆಯಿಂದ ಹೊಡೆದು, ಬೆಂಕಿಗೂಡಿಗೆ ತಳ್ಳಿ, ಕೊಲೆ ಮಾಡಿದ್ದಾನೆ. ಆದರೆ, ಆ ಇಟ್ಟಿಗೆ ಮಾತ್ರ ಸಿಕ್ಕಿರಲಿಲ್ಲ. ಡಿಸೋಜ ವಿವರಣೆ ನೀಡಿದ,

"ಹೂಕುಂಡ ಇಡಲು ತಾನು ಇಟ್ಟಿಗೆ ತಂದಿದ್ದೆ ಎನ್ನುವುದು ಚೆಟ್ಟಿಯಪ್ಪನ ಹೇಳಿಕೆ. ಅದು ನಿಜವಾಗಿದ್ದರೆ, ಅದು ಅಲ್ಲಿ ಇರಬೇಕಿತ್ತಲ್ಲ. ಮೊದಲಿಗೆ, ಅದೊಂದು ಅಗ್ನಿ ಅವಘಡ ಅಂತ ದಾಖಲಾಗಿತ್ತು. ಕೊಲೆ ಅಂತ ಗೊತ್ತಾಗಿ, ಪೊಲೀಸರು ಸ್ಥಳಕ್ಕೆ ಹೋಗುವಾಗ ಎರಡು ದಿನ ಕಳೆದಿತ್ತು. ಸಾಕ್ಷ್ಯ ನಾಶಕ್ಕೆ ಬೇಕಾದಷ್ಟು ಸಮಯವಿತ್ತು."

"ಕೊಲೆಗೆ ಮೋಟಿವ್ ಏನು?"

"ಹಣ! ಮಿಥಿಲಾಳಿಗೆ ತಂದೆಯಿಂದ ಸಿಕ್ಕಿದ ಕಾಫಿ ತೋಟಗಳಿವೆ. ಕೆಲವನ್ನು ಆಕೆ ಜುಜುಬಿ ಮೊತ್ತಕ್ಕೆ ಈಗಾಗಲೇ ಮಾರಿದ್ದಾಳೆ. ಈಗ ಇನ್ನೊಂದನ್ನು ಕಡಿಮೆ ದರಕ್ಕೆ ಅರುಣ್ ಚೆಂಗಪ್ಪ ಎನ್ನುವವನಿಗೆ ಮಾರಲು ಆಕೆ ಸಿದ್ಧಳಾಗಿದ್ದಾಳೆ. ಇದಕ್ಕೆ ಚೆಟ್ಟಿಯಪ್ಪ ವಿರೋಧಿಸಿದ್ದಾನೆ. ಹೆಚ್ಚಿನ ದರ ನೀಡಲು ಅಪ್ಪಣ್ಣ ಎನ್ನುವವನು ತಯಾರಿದ್ದಾನೆ ಎನ್ನುವುದು ಚೆಟ್ಟಿಯಪ್ಪನ ವಾದ. ಈ ಮಾಹಿತಿ ನೀಡಿದವನು ಮಿಥಿಲಾಳ ವಕೀಲ ತಿಮ್ಮಯ್ಯ. ನಮಗೆ ಮನೆಯಲ್ಲಿ ಅಪ್ಪಣ್ಣನ ಹೆಸರಿನಲ್ಲಿರುವ ಖರೀದಿ ಒಪ್ಪಂದ ಪತ್ರ ಸಿಕ್ಕಿತು. ಅದಕ್ಕೆ ಸಹಿ ಹಾಕಲು ಮಿಥಿಲಾ ನಿರಾಕರಿಸಿದ್ದಳಂತೆ. ಜೊತೆಗೆ, ಗಂಡ ಹೆಂಡತಿ ಅನ್ಯೋನ್ಯವಾಗಿರಲಿಲ್ಲವಂತೆ. ನಿತ್ಯ ಜಗಳವಾಗುತ್ತಿತ್ತೆಂದು ನೆರೆಹೊರೆಯವರು ಹೇಳಿದ್ದಾರೆ. ಇಬ್ಬರ ನಡುವೆ ವಯಸ್ಸಿನ ಅಂತರವಿತ್ತು. ಅವರಿಗೆ ಮಕ್ಕಳಿಲ್ಲ."

"ಕಡಿಮೆ ಕ್ರಯಕ್ಕೆ ಆಕೆ ಯಾಕೆ ಮಾರಲು ಬಯಸಿದ್ದಳು?"

"ಚೆಂಗಪ್ಪನ ಪ್ರಕಾರ, ಆಕೆ ಆತನಿಂದ ಬಹಳಷ್ಟು ಸಾಲ ಪಡೆದಿದ್ದಳಂತೆ."

ಮಾತು ಮುಗಿಸುವಂತೆ ಎದ್ದು ನಿಂತ ಡಿಸೋಜ.

ಡಿಸೋಜನ ನೆರವಿನಿಂದ ನಾವು ಜೈಲಿನಲ್ಲಿ ಚೆಟ್ಟಿಯಪ್ಪನನ್ನು ಭೇಟಿಯಾದೆವು. ಆತನಿಗೆ ನಮ್ಮ ಉದ್ದೇಶ ಅರುಹಿದಾಗ, ಮೊಗದಲ್ಲಿ ಅಸಮಾಧಾನ ಬಿಂಬಿಸಿ, ಆತ ಲೊಚಗೊಟ್ಟಿದ,

"ಇದೊಂದು ಮುಗಿದ ಪ್ರಕರಣ. ಸುಮ್ಮನೆ ಕೆದಕಬೇಡಿ."

"ಭಯಪಡಬೇಡಿ. ನಿಮಗೆ ಯಾರ ಮೇಲಾದರೂ ಅನುಮಾನವಿದೆಯೇ? ನಾವೊಮ್ಮೆ ನಿಮ್ಮ ಮನೆಯಲ್ಲಿ ತಲಾಶು ಮಾಡಲೇ?" ಕರಮಚಂದ ಹೇಳಿದಾಗ, ಆತ ಬಿಳಿಚಿಕೊಂಡ.

"ಲ್ಯಾಪ್‌ಟಾಪ್!!... ಮನೆಯಲ್ಲಿ ಏನೂ ಸಿಗದು. ದಯವಿಟ್ಟು ತನಿಖೆ ಮಾಡಬೇಡಿ."

ಅನಂತರ ಯಾವ ಪ್ರಶ್ನೆಗಳಿಗೂ ಆತ ಪ್ರತಿಕ್ರಿಯಿಸಲಿಲ್ಲ. ಅಲ್ಲಿಂದ ಹೊರಡುವಾಗ, ಡಿಸೋಜನಿಂದ ಮನೆಯ ಕೀ ಪಡೆದುಕೊಂಡೆವು.

ಕತ್ತಲಾವರಿಸಿದ ಮೇಲಷ್ಟೇ ನಾವು ಚೆಟ್ಟಿಯಪ್ಪನ ಮನೆಯತ್ತ ಹೋದೆವು. ಮೊದಲಿಗೆ ಹತ್ತಿರದ ವಸತಿ ಸಂಕೀರ್ಣದಲ್ಲಿದ್ದ ದೊರೆಮಣಿಯನ್ನು ಭೇಟಿಯಾದೆವು. ಆತನ ಬಾಲ್ಕನಿಯಲ್ಲಿ ನಿಂತರೆ, ಚೆಟ್ಟಿಯಪ್ಪನ ಮನೆ, ತೋಟ ನಿಚ್ಚಳವಾಗಿ ಕಾಣಿಸುತ್ತಿತ್ತು.

"ಆವತ್ತು ಬೆಳಗ್ಗೆ, ನಾನು ಬಾಲ್ಕನಿಯಲ್ಲಿ ನಿಂತಿದ್ದಾಗ, ಚೆಟ್ಟಿಯಪ್ಪ ತೋಟದಲ್ಲಿದ್ದ ಇಟ್ಟಿಗೆಯೊಂದನ್ನು ಮನೆಯೊಳಗೆ ಒಯ್ದಿದ್ದನ್ನು ಕಂಡಿದ್ದೆ. ನನಗದು ವಿಚಿತ್ರವಾಗಿ ಕಂಡಿತ್ತು. ಸಂಜೆ ಅವರ ಹೆಂಡ್ತಿ ಸತ್ತಳು."

"ಗಂಡ ಹೆಂಡಿರೊಳಗೆ ಜಗಳವಾಗುತ್ತಿತ್ತೆ?" ನಾನು ಕಾಫಿ ಗುಟುಕರಿಸುತ್ತಾ ಪ್ರಶ್ನಿಸಿದೆ.

"ಅದು ಮಾಮೂಲು ಬಿಡಿ. ಅವರ ಹೆಂಡತಿ ತಾಟಕಿ. ಇನ್ನೊಂದು ವಿಚಿತ್ರ ಸಂಗತಿ ಗೊತ್ತೇ? ಮಿಥಿಲಾ ಸತ್ತ ಒಂದು ವಾರದಲ್ಲಿ ಚೆಟ್ಟಿಯಪ್ಪ ಮೊಬೈಲಿನಲ್ಲಿ ಒಂದು ವಿಚಿತ್ರ ಸ್ಟೇಟಸ್ ಹಾಕಿದ್ದರು.